# 2020-21

# ಕೋವಿಡ್–19 ಹಿನ್ನಲೆಯಲ್ಲಿ ಕಾಲೇಜು ಆರಂಭಿಸಲು ಪ್ರಮಾಣಿತ ಕಾರ್ಯಾಚರಣಾ ವಿಧಾನ




**ಪದವಿ ಪೂರ್ವ ಶಿಕ್ಷಣ ಇಲಾಖೆ**

**18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು– 560 012**

**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.**

# ಕೋವಿಡ್-19 ರ ಹಿನ್ನೆಲೆಯಲ್ಲಿ ಕಾಲೇಜುಗಳನ್ನು ಆರಂಭಿಸಲು ಪ್ರಮಾಣಿತ ಕಾರ್ಯಾಚರಣಾ ವಿಧಾನ (SOP)

2020-21ನೇ ಸಾಲಿನ ಶೈಕ್ಷಣಿಕ ಅವಧಿಯು ಕೋವಿಡ್-19ರ ವಿಷಮ ಸ್ಥಿತಿಯಿಂದ ಇಲ್ಲಿಯವರೆಗೆ ಪ್ರಾರಂಭವಾಗಿರಲಿಲ್ಲ. ಪದವಿ ಪೂರ್ವ ಶಿಕ್ಷಣ ಹಂತದ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ತರಗತಿಗಳನ್ನು ಪ್ರಾರಂಭಿಸಬೇಕಾಗಿದೆ.

ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಸುರಕ್ಷಿತವಾಗಿ ಕಾಲೇಜು ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲು ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ ಆಯಾ ಜಿಲ್ಲಾ ಉಪನಿರ್ದೇಶಕರ ಮೂಲಕ ತಿಳಿಸಲಾಗುತ್ತಿದೆ.

## 1. ಸಾಮಾನ್ಯ ನಿಯಂತ್ರಣ ಕ್ರಮಗಳು :

ಕಾಲೇಜಿನಲ್ಲಿ ಪ್ರಾಂಶುಪಾಲರ, ಉಪನ್ಯಾಸಕರ, ಸಿಬ್ಬಂದಿವರ್ಗದವರ ಹಾಗೂ ವಿದ್ಯಾರ್ಥಿಗಳ ಆರೋಗ್ಯದ ಬಗ್ಗೆ ಕಾಳಜಿ ತೆಗೆದುಕೊಳ್ಳುವ ಸಂಬಂಧವಾಗಿ ಈ ಕೆಳಕಂಡ **"ಸಾಮಾನ್ಯ ನಿಯಂತ್ರಣ ಕ್ರಮ"**ಗಳನ್ನು ಕಡ್ಡಾಯವಾಗಿ ಪಾಲಿಸುವುದು.

- ಕನಿಷ್ಠ 06 ಅಡಿಗಳ ಭೌತಿಕ ಅಂತರವನ್ನು ಎಲ್ಲರೂ ಕಡ್ಡಾಯವಾಗಿ ಪಾಲಿಸುವುದು.
- ಮುಖ ಕವಚ/ಮಾಸ್ಕ್‌ಗಳನ್ನು ಕಡ್ಡಾಯವಾಗಿ ಬಳಕೆ ಮಾಡುವುದು.
- ಆಗಾಗ ಕೈಗಳನ್ನು ಸೋಪಿನಿಂದ ತೊಳೆಯಬೇಕು (ಪ್ರತಿಸಲ ಕೈ ತೊಳೆಯುವಾಗ ಕನಿಷ್ಠ 40 ರಿಂದ 60 ಸೆಕೆಂಡ್‌ಗಳು) ಹಾಗೂ ಸ್ಯಾನಿಟೈಸರ್ ಬಳಸಬೇಕು.
- ಕೆಮ್ಮುವಾಗ ಹಾಗೂ ಸೀನುವಾಗ ಕಡ್ಡಾಯವಾಗಿ ಮುಖಕ್ಕೆ ಕರವಸ್ತ್ರ ಅಥವಾ Tissue ಪೇಪರ್ ಬಳಸಬೇಕು ಹಾಗೂ ಅವುಗಳನ್ನು ಸೂಕ್ತ ವಿಧಾನದಲ್ಲಿ ನಾಶಗೊಳಿಸುವುದು.
- ಕೆಮ್ಮುವಾಗ, ಸೀನುವಾಗ, ಮೊಣಕೈಯನ್ನು ಅಡ್ಡ ಹಿಡಿಯುವುದು ಉತ್ತಮ.
- ಎಲ್ಲೆಂದರಲ್ಲಿ ಉಗುಳುವುದನ್ನು ಕಡ್ಡಾಯವಾಗಿ ನಿಷೇಧಿಸುವುದು ಹಾಗೂ ಎಲ್ಲರೂ ಅದನ್ನು ಕಡ್ಡಾಯವಾಗಿ ಪಾಲಿಸುವುದು.
- ಸಾಧ್ಯವಾದಷ್ಟು ಆರೋಗ್ಯ ಸೇತು App ನ್ನು ಅಳವಡಿಸಿಕೊಂಡು ಬಳಸುವುದು ಉತ್ತಮ.

## 2. ಕಾಲೇಜುಗಳ ಆರಂಭಕ್ಕೆ ಮುನ್ನ :

- ಎಲ್ಲಾ ಶೈಕ್ಷಣಿಕ ಚಟುವಟಿಕಗಳನ್ನು ಆರಂಭಿಸುವ ಮುನ್ನ ವಿದ್ಯಾರ್ಥಿಗಳು ಸಾಮಾನ್ಯವಾಗಿ ಬಳಸುವ ಬೋಧನಾ ಕೊಠಡಿ, ಪ್ರಯೋಗಾಲಯಗಳು ಹಾಗೂ ಇನ್ನಿತರ ಪ್ರದೇಶಗಳನ್ನು 1% ಸೋಡಿಯಂ ಹೈಪೊಕ್ಲೋರೈಟ್ ದ್ರಾವಣದಿಂದ ಸ್ಯಾನಿಟೈಜ್ ಮಾಡಬೇಕು.
- ಕಾಲೇಜುಗಳನ್ನು ಕೊವಿಡ್–19 ಕಂಟೋನ್‌ಮೆಂಟ್ ಕೊಠಡಿಯಾಗಿ ಬಳಕೆ ಮಾಡಿದ್ದರೆ ಅಂತಹ ಕಾಲೇಜುಗಳನ್ನು ಸಂಪೂರ್ಣವಾಗಿ ಒಂದಕ್ಕಿಂತ ಹೆಚ್ಚು ಬಾರಿ ಸ್ಯಾನಿಟೈಜ್ ಮಾಡುವುದು. ಈ ಸಂಬಂಧ ಕೇಂದ್ರ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ನಿಗಧಿ ಪಡಿಸಿದ ಮಾರ್ಗಸೂಚಿಗಳನ್ನು ಪಾಲಿಸುವುದು ಕಡ್ಡಾಯವಾಗಿರುತ್ತದೆ.
- **ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಸ್ವಯಂ ಪ್ರೇರಣೆಯಿಂದ ಮತ್ತು ಅವರ ಪೋಷಕರ ಸಮ್ಮತಿ ಪತ್ರ ತಂದಲ್ಲಿ ಮಾತ್ರ ಅವರು ಭೌತಿಕ ತರಗತಿಗಳಿಗೆ ಹಾಜರಾಗುವುದು.**
- **ವಿದ್ಯಾರ್ಥಿಗಳಿಗೆ ಕೋವಿಡ್–19 ರ ಸೋಂಕಿನ ಲಕ್ಷಣಗಳು ಇಲ್ಲದ ಕುರಿತು ದೃಡೀಕರಣ ಪತ್ರವನ್ನು ಅವರ ಪೋಷಕರಿಂದ ಪಡೆಯುವುದು ಕಡ್ಡಾಯವಾಗಿರುತ್ತದೆ.**
- ವಿದ್ಯಾರ್ಥಿಗಳಿಗೆ ಬಯೊಮೆಟ್ರಿಕ್ ಹಾಜರಾತಿ ಬದಲು, ಭೌತಿಕ ಹಾಜರಾತಿ ತೆಗೆದುಕೊಳ್ಳಲು ಕ್ರಮ ತೆಗೆದುಕೊಳ್ಳುವುದು.
- ಸೋಪು / ಹ್ಯಾಂಡ್‌ವಾಷ್‌ನಿಂದ ಕೈ ತೊಳೆಯುವ ವ್ಯವಸ್ಥೆಯನ್ನು ಕಡ್ಡಾಯವಾಗಿ ಪೂರೈಸಿ, ಇರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು
- ಕಾಲೇಜಿನ ಹೊರಾಂಗಣದ ನೆಲದ ಮೇಲೆ 6 ಅಡಿಗಳ ಅಂತರದಲ್ಲಿ ಗುರುತು ಹಾಕಿ ಎಲ್ಲಾ ವಿದ್ಯಾರ್ಥಿಗಳು ಸಾಲುಗಳಲ್ಲಿ ಚಲಿಸಲು ಅನುವು ಮಾಡಿಕೊಡುವುದು. ಅದೇ ರೀತಿ ಎಲ್ಲಾ ಸಂದರ್ಭದಲ್ಲೂ ವಿದ್ಯಾರ್ಥಿಗಳು ಗುಂಪು ಸೇರದಂತೆ ನೋಡಿಕೊಂಡು ಸಾಲಾಗಿ ಬರುವ ಹಾಗೂ ಹೋಗುವ ವ್ಯವಸ್ಥೆಯನ್ನು ಮಾಡುವುದು. ಈ ಎಲ್ಲಾ ನಿಯಮಗಳು ಗ್ರಂಥಾಲಯ, ಊಟದ ಕೊಠಡಿ, ಉಪನ್ಯಾಸಕರ ಕೊಠಡಿ, ಪ್ರಾಂಶುಪಾಲರ ಕೊಠಡಿ ಹಾಗೂ ಕಾಲೇಜು ಕಛೇರಿಗಳಲ್ಲಿ ಪಾಲಿಸುವುದು.
- ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಕಾಲೇಜಿನ ಹೊರಾಂಗಣದಲ್ಲಿಯೂ ಸಹ ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳಬೇಕು.
- ಸಾಮೂಹಿಕ ಪ್ರಾರ್ಥನೆ, ಕ್ರೀಡೆಗಳು ಹಾಗೂ ಯಾವುದೇ ಚಟುವಟಿಕೆಗಳಿಂದ ಉಂಟಾಗುವ ಸಂದಣಿಯನ್ನು ಕಡ್ಡಾಯವಾಗಿ ನಿಷೇದಿಸುವುದು.
- ಅಗತ್ಯ ಸಂದರ್ಭದಲ್ಲಿ ಬೇಕಾಗುವ ರಾಜ್ಯ ಸಹಾಯವಾಣಿ ಹಾಗೂ ಇತರೆ ಸ್ಥಳಿಯ ಆರೋಗ್ಯ ಕೇಂದ್ರಗಳ ದೂರವಾಣಿ ಸಂಖ್ಯೆಗಳನ್ನು ಸೂಚನಾ ಫಲಕ / ಇತರೆ ಸ್ಥಳಗಳಲ್ಲಿ ಪ್ರದರ್ಶಿಸುವುದು.
- ಕಾಲೇಜುಗಳಲ್ಲಿ ಬಳಕೆ ಮಾಡುವ ಕಪಾಟು ವ್ಯವಸ್ಥೆಗಳು ಸಹ ಉಪಯೋಗಕ್ಕೆ ಲಭ್ಯವಿದಲ್ಲಿ, ಸದರಿ ಕಪಾಟುಗಳನ್ನು ಸ್ಯಾನಿಟೈಜ್ ಮಾಡುವುದು ಹಾಗೂ ವಿದ್ಯಾರ್ಥಿಗಳು ಸಾಮಾಜಿಕ ಅಂತರವನ್ನು ಕಾಪಾಡಿಕೊಂಡು ಕಪಾಟುಗಳನ್ನು ಬಳಸಬಹುದಾಗಿದೆ.
- ಕಾಲೇಜಿನ ಆವರಣದಲ್ಲಿ ಈಜುಕೊಳಗಳು ಇದ್ದರೆ ಅವುಗಳನ್ನು ಬಳಸುವಂತಿಲ್ಲ ಮತ್ತು ಅವುಗಳನ್ನು ಸಂಪೂರ್ಣವಾಗಿ ಮುಚ್ಚುವುದು.

## 3. ಕಾಲೇಜುಗಳ ಪುನಾರಾರಂಭದ ನಂತರ :

- ಕಾಲೇಜಿನ ಆವರಣವನ್ನು ಪ್ರವೇಶಿಸಲು ನಿಗದಿ ಪಡಿಸಿದ ಸ್ಥಳದಲ್ಲಿ Hand Sanitizer ಹಾಗೂ thermal gun ಇರುವಂತೆ ನೋಡಿಕೊಳ್ಳಬೇಕು, ಸಂಖ್ಯೆ ಹೆಚ್ಚಿದ್ದ ಸಂದರ್ಭದಲ್ಲಿ ಹೆಚ್ಚಿನ ಸ್ಥಳಗಳಲ್ಲಿ ಪ್ರವೇಶ ಹಾಗೂ ನಿರ್ಗಮನ ದ್ವಾರಗಳನ್ನು ಸೂಕ್ತ ವ್ಯವಸ್ಥೆಯೊಂದಿಗೆ ಮಾಡುವುದು.
- Hand Sanitizer ಹಾಗೂ Thermal Gun ಗಳನ್ನು ಕಾಲೇಜಿನ ಸಂಚಿತ ನಿಧಿಯಿಂದ ಅಗತ್ಯಕ್ಕನುಗುಣವಾಗಿ ಕೆ.ಟಿ.ಪಿ.ಪಿ ನಿಯಮಗಳಂತೆ ಖರೀದಿಸುವುದು ಅಥವಾ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಗಳ ಪ್ರಯೋಜಕತ್ವದಿಂದ ಪಡೆಯಬಹುದು.
- ಪ್ರತಿದಿನವೂ 45 ನಿಮಿಷದ 4 ಅವಧಿಗಳನ್ನು ನಡೆಸುವುದು.
- ವಿದ್ಯಾರ್ಥಿಗಳಿಗೆ ಹಾಜರಾತಿಯನ್ನು ಕಡ್ಡಾಯಗೊಳಿಸಬಾರದು.
- ಒಂದು ತರಗತಿಯಲ್ಲಿ 15 ವಿದ್ಯಾರ್ಥಿಗಳಂತೆ ವ್ಯವಸ್ಥೆ ಮಾಡುವುದು ಹಾಗೂ ಕೊಠಡಿಯ ವಿಸ್ತೀರ್ಣ ಅಥವಾ ಸ್ಥಳೀಯ ಅಗತ್ಯಕ್ಕೆ ಅನುಗುಣವಾಗಿ ವಿದ್ಯಾರ್ಥಿಗಳ ಸಂಖ್ಯೆಯನ್ನು ನಿಗದಿ ಪಡಿಸಿಕೊಳ್ಳಬಹುದಾಗಿದೆ.
- ರೋಗ ಲಕ್ಷಣಗಳಿಲ್ಲದ ವಿದ್ಯಾರ್ಥಿಗಳು / ಉಪನ್ಯಾಸಕರು / ಸಿಬ್ಬಂದಿಗಳನ್ನು ಮಾತ್ರ ಕಾಲೇಜು ಆವರಣದಲ್ಲಿ ಬರಲು ಅವಕಾಶ ನೀಡಿ, ಇವರಲ್ಲಿ ಯಾರಿಗಾದರೂ ರೋಗ ಲಕ್ಷಣಗಳು ಕಂಡು ಬಂದಲ್ಲಿ ಹತ್ತಿರದ ಆರೋಗ್ಯ ಕೇಂದ್ರಗಳಿಗೆ ವರದಿ ಮಾಡಿಕೊಳ್ಳುವಂತೆ ತಿಳಿಸುವುದು ಮತ್ತು ಮಾಡಿಕೊಳ್ಳಲು ಸಹಕರಿಸುವುದು.
- ಕೋವಿಡ್–19ರ ನಿಯಂತ್ರಣ ಕ್ರಮಗಳ ಬಗ್ಗೆ ಇರುವ ಮಾಹಿತಿಯನ್ನು ಹೊಂದಿರುವ ಪೋಸ್ಟರ್‌ಗಳನ್ನು ಅಂಟಿಸಬೇಕು.
- ವಾಹನಗಳ ನಿಲ್ದಾಣಗಳಲ್ಲಿ, ಮೆಟ್ಟಿಲುಗಳನ್ನು ಹತ್ತುವಾಗ ಮತ್ತು ಇಳಿಯುವಾಗ ಹಾಗೂ ಕಾರಿಡಾರ್‌ಗಳಲ್ಲಿ ಗುಂಪುಗೂಡದಂತೆ ನಿಯಂತ್ರಣ ಮಾಡಬೇಕಾಗುತ್ತದೆ. ಸಾಮಾಜಿಕ ಅಂತರ ಕಾಪಾಡಲು ಸೂಕ್ತ ನಿರ್ವಹಣಾ ತಂತ್ರಗಳನ್ನು ಬಳಸಬೇಕು.
- ಸಂದರ್ಶಕರ ಪ್ರವೇಶವನ್ನು ಕಡ್ಡಾಯವಾಗಿ ನಿಯಂತ್ರಿಸುವುದು / ತಡೆಯುವುದು.
- ಪ್ರಾಯೋಗಿಕ ತರಗತಿಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಪ್ರಯೋಗಾಲಯದ ವಿಸ್ತೀರ್ಣಕ್ಕನುಗುಣವಾಗಿ, ದೈಹಿಕ ಅಂತರ ಕಾಯ್ದುಕೊಂಡು, ನಿರ್ವಹಿಸುವಂತೆ ಸಮಯ ನಿಗದಿಗೊಳಿಸುವುದು ಹಾಗೂ ವಿದ್ಯಾರ್ಥಿಗಳ ತಂಡಗಳನ್ನು ರಚಿಸುವುದು.
- ಪುನರಾವರ್ತಿತವಾಗಿ ಬಳಕೆಯಾಗುವ ಉಪಕರಣಗಳನ್ನು ಹಾಗೂ ಟೇಬಲ್‌ಗಳನ್ನು ನಂಜುಕಾರಕ (Disinfected) ಬಳಸಿ ಶುದ್ಧಗೊಳಿಸುವುದು.
- ಶೈಕ್ಷಣಿಕ ಸಂಸ್ಥೆಗಳು ವಿದ್ಯಾರ್ಥಿಗಳನ್ನು ಕರೆತರಲು ಹಾಗೂ ವಿದ್ಯಾರ್ಥಿಗಳನ್ನು ಮನೆಗೆ ಕಳುಹಿಸಲು ಸೂಕ್ತ ವಾಹನಗಳ ವ್ಯವಸ್ಥೆ ಮಾಡಿದಲ್ಲಿ, ಸಾಮಾಜಿಕ ಅಂತರ ಕಾಪಾಡುವುದು ಹಾಗೂ ವಾಹನಗಳನ್ನು 1% ಸೋಡಿಯಂ ಹೈಪೋಕ್ಲೋರೆಟ್ ದ್ರಾವಣದಿಂದ ಸ್ಯಾನಿಟೈಸ್ ಮಾಡಿರುವುದನ್ನು ಖಾತ್ರಿಪಡಿಸಿಕೊಳ್ಳುವುದು.

## 4. ಕಾಲೇಜು ನಡೆಯುತ್ತಿರುವ ಸಮಯದಲ್ಲಿ :

- ಪ್ರತಿದಿನ ಕೊಠಡಿಗಳು ಹಾಗೂ ಕಾರಿಡಾರ್‌ಗಳ ನೆಲವನ್ನು ಸ್ವಚ್ಛಗೊಳಿಸುವುದು.
- ಶೌಚಾಲಯಗಳಲ್ಲಿ ಸೋಪ್ ಹಾಗೂ ಸಾಮಾನ್ಯ ಪ್ರದೇಶಗಳಲ್ಲಿ ಬಳಸಲು Hand Sanitizer ಸಾಕಷ್ಟು ಪ್ರಮಾಣದಲ್ಲಿ ದೊರೆಯುವಂತೆ ಕ್ರಮತೆಗೆದುಕೊಳ್ಳುವುದು
- ವಿದ್ಯಾರ್ಥಿಗಳು ಸಾಮಾನ್ಯವಾಗಿ ಬಳಸುವ ಮೇಜುಗಳು, ಬಾಗಿಲುಗಳು, ಡೆಸ್ಕಗಳು, ಚೇರ್‌ಗಳು, ಬೆಂಚುಗಳು ಹಾಗೂ ಶೌಚಾಲಯದಲ್ಲಿ ಬಳಸುವ ವಸ್ತುಗಳನ್ನು 1% ಸೋಡಿಯಂ ಹೈಪೋಕ್ಲೋರೆಟ್ ಬಳಸಿ ಸ್ಯಾನಿಟೈಸ್ ಮಾಡಬೇಕು.
- ಕಾಲೇಜುಗಳಲ್ಲಿ ಬಳಸುವ ಬೋಧನಾ ಸಾಮಗ್ರಿಗಳು, ಕಂಪ್ಯೂಟರ್, ಲ್ಯಾಪ್‌ಟಾಪ್, ಇತರೆ ವಸ್ತುಗಳನ್ನು ಆಲ್ಕೋಹಾಲ್‌ಯುಕ್ತ ದ್ರಾವಣ ಬಳಸುವ ಮೂಲಕ ಸೋಂಕು ರಹಿತವಾಗುವಂತೆ ನೋಡಿಕೊಳ್ಳುವುದು.
- ನೀರು ಕುಡಿಯುವ ಮತ್ತು ಕೈ ತೊಳೆಯುವ ಸ್ಥಳಗಳನ್ನು, ವಾಶ್‌ರೂಮ್ / ಶೌಚಾಲಯಗಳನ್ನು ಸ್ವಚಗೊಳಿಸುವುದು.
- ಬಳಸಿದ ಫೇಸ್ ಕವರ್/ಮುಖವಾಡಗಳನ್ನು ಪ್ರತ್ಯೇಕವಾಗಿ ವಿಲೇವಾರಿ ಮಾಡಲು ಎಲ್ಲರಿಗೂ ತಿಳಿಸುವುದು. ಕಾಲೇಜಿನ ಆವರಣದಲ್ಲಿ ಸಂಗ್ರಹಿಸಲಾದ ಸಾಮಾನ್ಯ ಘನತ್ಯಾಜ್ಯದ ಮುಚ್ಚಿದ ತೊಟ್ಟಿಗಳನ್ನು, ಕನಿಷ್ಠ ಮೂರು ದಿನಗಳಿಗೊಮ್ಮೆ ಕಡ್ಡಾಯವಾಗಿ ವಿವೇವಾರಿ ಮಾಡತಕ್ಕದ್ದು.
- ಕಾಲೇಜಿನಲ್ಲಿ ಆರೋಗ್ಯ ಸುರಕ್ಷತೆ ಕಾರಣಗಳಿಗಾಗಿ ಶುಚಿಗೊಳಿಸುವ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಭಾಗಿಯಾಗದಂತೆ ನೋಡಿಕೊಳ್ಳಬೇಕು.
- ಕಾಲೇಜನ್ನು ಬಿಡುವಾಗ ಮತ್ತು ಬಿಡುವಿನ ಸಮಯದಲ್ಲಿ ವಿದ್ಯಾರ್ಥಿಗಳು ಒಟ್ಟುಗೂಡದಂತೆ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವುದು.
- ವಿದ್ಯಾರ್ಥಿಗಳಿಗೆ, ಪೋಷಕರಿಗೆ, ಉಪನ್ಯಾಸಕರಿಗೆ ಹಾಗೂ ಸಿಬ್ಬಂದಿಗಳಿಗೆ ಕೋವಿಡ್ ರೋಗಗಳ ಬಗ್ಗೆ ಅರಿವು ಮೂಡಿಸುವುದು.
- 51 ವರ್ಷ ಮೇಲ್ಪಟ್ಟ ವಯಸ್ಸಿನ ಉಪನ್ಯಾಸಕರು ಮಾಸ್ಕ್ ಜೊತೆಗೆ ಫೇಸ್ ಗಾರ್ಡನ್ನು ಬಳಸುವುದು.

## 5. ಉಪನ್ಯಾಸಕರು, ಸಿಬ್ಬಂದಿವರ್ಗ ಹಾಗೂ ವಿದ್ಯಾರ್ಥಿಗಳಿಗೆ ರೋಗ ಲಕ್ಷಣಗಳು ಕಂಡುಬಂದಲ್ಲಿ ಈ ಕೆಳಕಂಡ ಕ್ರಮಗಳನ್ನು ಅನುಸರಿಸುವುದು :

- ಅನಾರೋಗ್ಯದ ವ್ಯಕ್ತಿಯನ್ನು ಇತರರಿಂದ ಪ್ರತ್ಯೇಕಿಸಲಾಗಿರುವ ಕೋಣೆ (Isolation room) ಅಥವಾ ಪ್ರದೇಶದಲ್ಲಿ ಇರಿಸುವುದು, ಪೋಷಕರಿಗೆ / ಸಂಬಂಧ ಪಟ್ಟವರಿಗೆ ಮಾಹಿತಿ ನೀಡುವುದು.
- ಅನಾರೋಗ್ಯದ ವ್ಯಕ್ತಿಯು, ಮುಖಕವಚವನ್ನು ವೈದ್ಯರು ಪರೀಕ್ಷಿಸುವವರೆಗೂ ಧರಿಸುವುದು.
- ಹತ್ತಿರದ ವೈದ್ಯಕೀಯ ಸೌಲಭ್ಯ, ರಾಜ್ಯ ಅಥವಾ ಜಿಲ್ಲಾ ಹೆಲ್ಪ್‌ಲೈನ್‌ಗೆ ತಕ್ಷಣ ಮಾಹಿತಿಯನ್ನು ನೀಡುವುದು.

- ರೋಗದ ಲಕ್ಷಣಗಳು ಕಂಡುಬಂದಲ್ಲಿ ಸಾರ್ವಜನಿಕ ಸಕ್ಷಮ ಆರೋಗ್ಯ ಇಲಾಖೆ ವತಿಯಿಂದ ಸಂಬಂಧಿಸಿದ ನಿರ್ವಹಣೆಗಳನ್ನು ಕೈಗೊಂಡು ಸೋಂಕು ನಿವಾರಿಸುವ ಸಂಬಂಧ ಅವಶ್ಯಕ್ರಮಗಳನ್ನು ಕೈಗೊಳ್ಳುವುದು.
- ಕಾಲೇಜಿನ ಆವರಣದಲ್ಲಿ ಯಾವುದೇ ವ್ಯಕ್ತಿಗೆ ಸೋಂಕು ಸಕಾರಾತ್ಮಕವಾಗಿ (Positive) ಕಂಡುಬಂದಲ್ಲಿ ಕೂಡಲೇ ಕಾಲೇಜಿನ ಆವರಣವನ್ನು ಸ್ಯಾನಿಟೈಜ್ ಮಾಡುವುದು.

ಈ ಎಲ್ಲಾ ಮುನ್ನೆಚ್ಚರಿಕಾ ಕ್ರಮಗಳನ್ನು ಪಾಲಿಸುವುದರೊಂದಿಗೆ ಸರ್ಕಾರ ನಿಗಧಿಪಡಿಸಿದ ಮಾರ್ಗಸೂಚಿಗಳನ್ನು ಯಥಾವತ್ತಾಗಿ ಅಳವಡಿಸಿಕೊಳ್ಳಲು ಸೂಚಿಸಲಾಗಿದೆ.

ಈ ಸಂಬಂಧ ಉಪನ್ಯಾಸಕರು, ವಿದ್ಯಾರ್ಥಿಗಳ ಹಾಗೂ ಸಿಬ್ಬಂದಿ ವರ್ಗದವರಿಗೆ ತಿಳುವಳಿಕೆ ಮೂಡಿಸಿ, ಸಕ್ರಿಯವಾಗಿ ನಿರ್ವಹಣೆಯಾಗುವಂತೆ ಕ್ರಮವಹಿಸಬೇಕು. ಪ್ರಾಂಶುಪಾಲರು ಸ್ಥಳೀಯ ಆರೋಗ್ಯ ಇಲಾಖೆಯ ವೈದ್ಯಕೀಯ ಸಿಬ್ಬಂದಿಗಳಿಂದ, ಉಪನ್ಯಾಸಕರ ಮತ್ತು ಸಾರ್ವಜನಿಕರ ಸಹಕಾರ ಸಹಯೋಗದೊಂದಿಗೆ, ಎಲ್ಲಾ ರೀತಿಯ ಮುನ್ನೆಚ್ಚರಿಕಾ ಕ್ರಮವನ್ನು ವಹಿಸಬೇಕು. ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು ತಮ್ಮ ಜಿಲ್ಲೆಯ ಎಲ್ಲಾ ಕಾಲೇಜುಗಳಲ್ಲಿ ಈ ಬಗ್ಗೆ ಸಾಕಷ್ಟು ಎಚ್ಚರಿಕೆ ವಹಿಸಲು ಸೂಕ್ತ ಸೂಚನೆಗಳನ್ನು ನೀಡಿ, ಕಾಲ ಕಾಲಕ್ಕೆ ಸಕ್ರಿಯವಾಗಿ ನಿರ್ವಹಣೆಯಾಗುತ್ತಿರುವ ಕುರಿತು ಇಲಾಖೆಗೆ ವರದಿಯನ್ನು ನೀಡುವಂತೆ ಸೂಚಿಸಲಾಗುತ್ತದೆ.